**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 69/2019**

**ಡಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 23.04.2025**

**ಮುಂ. ಮುಖ್ಯ ವಿಚಾರಣೆಃ ಶ್ರೀ ಎ ವಿ ಕೆ ವಕೀಲರಿಂದ ಪ್ರತಿವಾದಿ ಪರ ವಕೀಲರುಃ**

3. ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಈ ಹಿಂದೆ ಲಿಖಿತ ಪ್ರಮಾಣ ಪತ್ರದಲ್ಲಿ ಸಲ್ಲಿಸಿದ್ದು, ಅದರ ಮುಂದುವರೆದ ಭಾಗವಾಗಿ ದಾಖಲೆಯನ್ನು ಹಾಜರು ಪಡಿಸಿದ್ದು, ದಿಃ 16.08.2010ರ ನೋಂದಾಯಿತವಲ್ಲದ ಖರೀದಿ ಕರಾರು ಪತ್ರದ ಮೂಲ ದಾಖಲೆಯನ್ನು ಬಾಕಿ ನೋಂದಾವಣಾ ಶುಲ್ಕವನ್ನು ಪಾವತಿಸಿದ ನಂತರ ವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಡಿಃ1 ಎಂದು, ಸಾಕ್ಷಿ ನಿಡಿಃ1ನ್ನು ನೋಡಿ ಅದರ ಮೇಲೆ ಇರುವ ಹೆಬ್ಬೆಟ್ಟಿನ ಗುರುತು ವಾದಿಯಾದ ರಾಮಪ್ಪ ಇವರದ್ದು ಅಂತ ಗುರುತಿಸಿದ್ದು, ಇನ್ನೊಂದು ಸಹಿಯನ್ನು ನೋಡಿ ಗುರುತಿಸಿದ್ದು ಅದು ವಾದಿಯ ಮಗಳು ನೀಲವ್ವ ಪೂಜಾರ ಇವರ ಸಹಿ ಎಂದು ಗುರುತಿಸಿದ್ದಕ್ಕೆ ಅದನ್ನು ನಿಡಿಃ1 ಎ ಎಂದು, ಇನ್ನುಳಿದ ನಾಲ್ಕು ಸಾಕ್ಷಿದಾರರ ಸಹಿಗಳನ್ನು ಸಾಕ್ಷಿ ನೋಡಿ ಅವುಗಳು ಕ್ರಮವಾಗಿ ನೀಲಪ್ಪ ಆಡಿನ, ಹನಮಂತಪ್ಪ ತಳಳ್ಳಿ, ನಿಂಗಪ್ಪ ಹಳ್ಳಿಕೇರಿ ಮತ್ತು ಪ್ರದಾನಪ್ಪ ಮಲ್ಲಾಪುರ ಇವರದ್ದು ಎಂದು ಗುರುತಿಸಿದ್ದಕ್ಕೆ ಅವುಗಳನ್ನು ಕ್ರಮವಾಗಿ ನಿಡಿಃ1(ಬಿ) ರಿಂದ 1(ಇ) ಎಂದು, ಸರ್ಟಿಫಿಕೇಟನ್ನು ನಿಡಿಃ2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**